**4 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ. ಎಮ್. ಎಫ್. ಸಿ, ನ್ಯಾಯಾಲಯ ಅಥಣಿ.**

**ಸಿ.ಸಿ. ನಂ. : 1924/2018** **ದಿನಾಂಕಃ27-05-2025**

**ಸಿ ಡಬ್ಲೂ : 9**

**ಪಿ ಡಬ್ಲೂ : 7**

-----------------------------------------------------------------------------------

**:ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು:**

****

| | |
|---|---|
| ಸಾಕ್ಷಿದಾರನ ಹೆಸರು | ಟಿ. ಎಮ್ ನಾಗರಾಳ |
| ಗಂಡ/ ತಂದೆಯ ಹೆಸರು | ಮಾರುತಿ ನಾಗರಾಳ |
| ವಯಸ್ಸು | 48 ವರ್ಷ |
| ಉದ್ಯೋಗ | ಮುಖ್ಯ ಪೊಲೀಸ ಪೇದೆ |
| ವಾಸಸ್ಥಳ | ಸಾಃ ಐಗಳಿ |

**<u>ಮುಖ್ಯ ವಿಚಾರಣೆಃ- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>**

ನಾನು ಅಥಣಿ ಪೋಲಿಸ್ ಠಾಣೆಯಲ್ಲಿ 2017 ರಿಂದ 2022 ರ ವರೆಗೆ ಮುಖ್ಯ ಪೊಲೀಸ ಪೇದೆ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 12-01-2018 ರಂದು ರಾತ್ರಿ 08.00 ಯಿಂದ ಬೆಳಿಗ್ಗೆ 08.00 ಗಂಟೆಗೆ ವರೆಗೆ ಠಾಣಾ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ರಾತ್ರಿ 12.00 ಗಂಟೆಗೆ ಅಥಣಿ ಸರಕಾರಿ ಆಸ್ಪತ್ರೆಯಿಂದ ಪೋನ ಮುಖಾಂತರ MLC ಇದೆ ಎಂದು ತಿಳಿಸಿದಾಗ ನಾನು ಕೂಡಲೆ ಅಥಣಿ ಸರಕಾರಿ ಆಸ್ಪತ್ರೆಗೆ ಹೋಗಿ ಸರಕಾರಿ ವೈಧಾಧಿಕಾರಿಗಳಿಗೆ ಬೇಟಿಯಾಗಿ ಗಾಯಾಳುಗಳ ಬಗ್ಗೆ ವಿಚಾರಿಸಿ, ಅವರು ಮಾತನಾಡುವ ಸ್ಥಿತಿಯಲ್ಲಿ ಇರುವರೆ ಎಂಬ ಬಗ್ಗೆ ಮಾಹಿತಿ ಸಂಗ್ರಹಿಸಿ ಯಾದಿ ಬರೆದು ಕೂಡಲೇ ಗಾಯಾಳುಗಳನ್ನು ಹೆಚ್ಚಿನ ಚಿಕಿತ್ರೆಗೆ ಮೈತ್ರಿ ಆಸ್ಪತ್ರೆಗೆ ಕಳುಹಿಸಲಾಯಿತು.

ದಿಃ 13-01-2015 ರಂದು 12.45 ಗಂಟೆಗೆ ಆಸ್ಪತ್ರೆಗೆ ಹೋಗಿ Doctor ನ್ನು ಬೇಟಿಯಾಗಿ ಗಾಯಾಳುಗಳನ್ನು ವಿಚಾರಣೆ ಮಾಡಿ ಯಾದಿ ಬರೆದುಕೊಟ್ಟು ಗಾಯಾಳುಗಳ ಕಡೆಯಿಂದ ಹೇಳಿ ಬರೆಯಿಸಿಕೊಟ್ಟ ಪಿರ್ಯಾದಿಯನ್ನು ಮಧ್ಯಾಹ್ನಾ 01.00 ಗಂಟೆಗೆ ಅಥಣಿ ಪಿ.ಎಸ್ Crime. ನಂ

21/18 ಕಲಂ 326, 323, 505, 506, R/W Sec 34 IPC ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ಮಧ್ಯಾಹ್ನ 1.45 ನಿಮಿಷಕ್ಕೆ ಈ ಪ್ರಕರಣದ ಮೂಲ FIR ಮತ್ತು ಮೂಲ ಪಿರ್ಯಾದಿ ಪ್ರತಿಯನ್ನು ನ್ಯಾಯಾಲಯಕ್ಕೆ HC 1015 ಎ ಬಿ ಹೊಸಲಕರ ಇವರ ಕೈಯಲ್ಲಿ ಕೊಟ್ಟು ಕಳುಹಿಸಿರುತ್ತೇನೆ ಮತ್ತು ನಕಲುಗಳನ್ನು ನಮ್ಮ ಮೇಲಾಧಿಕಾರಿಗಳಿಗೆ E mail ಮುಖಾಂತರ ಕಳುಹಿಸಿರುತ್ತೇನೆ. ಸಂಜೆ 4.45 ಗಂಟೆಗೆ ತಂಗಡಿ ಗ್ರಾಮಕ್ಕೆ ಹೋಗಿ ಶಿವಾಜಿ ಸರ್ಕಲ ಬಳಿ ನಿಂತು ಆಪಾದಿತರ ಮನೆಯು ಮುಂದೆ ನಿಂತು ನೋಡಲಾಗಿ ಆಪಾದಿತರು ಮೂರು ಜನ ಇದ್ದರು. ಅವರನ್ನು ಹಿಡಿದುಕೊಂಡು ಅವರನ್ನು ಘಟನಾ ಸ್ಥಳಕ್ಕೆ ಕರೆದುಕೊಂಡು ಹೋದರು. ಸಂಜೆ 05.00 ಗಂಟೆಗೆ ಮೂರು ಜನರನ್ನು ದಸ್ತಗೀರಿ ಮಾಡಿ ಎರಡು ಜನ ಪಂಚರನ್ನು ಕರೆಸಿ ಮತ್ತು ಪ್ರತ್ಯೇಕ್ಷ ದರ್ಶಿಯಾದಾ ಚಾಸಾ 4 ರವರನ್ನು ಕರೆಯಿಸಿ, ಚಾಸಾ 4 ರವರು ತೋರಿಸಿದ ಘಟನಾ ಸ್ಥಳವನ್ನು ತೋರಿಸಿದ ನಂತರ ಘಟನಾ ಸ್ಥಳವನ್ನು ಪಂಚಾಮೆ ಮಾಡಿ ಅದೆ ಸ್ಥಳದಲ್ಲಿ ಬಿದ್ದಿ ಕಬ್ಬಿಣದ ಹಾವಿನ ಬಾಲೆ ಇದನ್ನು ವಶಕ್ಕೆ ಪಡೆದುಕೊಳ್ಳಲಾಯಿತು. ಇದನ್ನು ಪಂಚರಿಗೆ ಮತ್ತು ಪ್ರತ್ಯೇಕ್ಷ ದರ್ಶಿಗಳಿಗೆ ನೋಟಿಸ ಕೊಟ್ಟು ಅವರ ಹೇಳಿಕೆಯನ್ನು ಪಡೆದುಕೊಂಡಿದ್ದು ಸಹಿಯನ್ನು ತೆಗೆದುಕೊಂಡಿದ್ದು. ಸದರಿ ಪಂಚನಾಮೆಯನ್ನು ಸಂಜೆ 05.00 ಗಂಟೆಯಿಂದ 06.00 ಗಂಟೆಯವರೆಗೆ ಮಾಡಲಾಯಿತು. ಮೂರು ಜನರನ್ನು ಪೊಲೀಸ ಠಾಣೆಗೆ ಕರೆದುಕೊಂಡು ಬಂದು ಠಾಣೆಯಲ್ಲಿ PF ತುಂಬಿ PSR ಬರೆದು, ರಾತ್ರಿ 09.00 ಗಂಟೆಗೆ ಆರೋಪಿಯನ್ನು HC 1015 PC 2655 ಇವರ ಜೊತೆಗೆ ನ್ಯಾಯಾಲಯಕ್ಕೆ ಬೆಂಗಾವಲು ಆಗಿ ಕಳುಹಿಸಿರುತ್ತೇನೆ.

ದಿಃ 17-01-2018 ರಂದು ಗಾಯದ ಪ್ರಮಾಣ ಪತ್ರವನ್ನು ಪಡೆಯುದಕ್ಕೆ Doctor ಮೈತ್ರಿ ಇವರಿಗೆ ಗಾಯದ ಪ್ರಮಾಣ ಪತ್ರ ಕೊಡುವಂತೆ ಯಾದಿ ಬರೆದು ಕೊಟ್ಟಿರುತ್ತೇನೆ ದಿಃ 23-01-2018 ರಂದು ಯಾದಿ ಕೊಟ್ಟಿರುತ್ತಾರೆ. ದಿಃ 22-03-2018 ರಂದು ಗಾಯದ ಪ್ರಮಾಣ ಪತ್ರವನ್ನು

ನೋಡಿಕೊಂಡು ಗಾಯಾಳುವಿಗೆ ಸಾಧಾ ಸ್ವರೂಪದ ಗಾಯವಾಗಿದ್ದರಿಂದ ಕಲ 326 ನ್ನು ಕಡಿಮೆ ಮಾಡಿ 324 ನ್ನು ಹಾಕಿ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ.

ದಿಃ 01-02-2018 ರಂದು ಅಥಣಿ ಸರಕಾರಿ ಆಸ್ಪತ್ರೆಯಿಂದ ಗಾಯಾಳುವಿನ ಗಾಯದ ಪ್ರಮಾಣವನ್ನು ಪಡೆದಿರುತ್ತೇನೆ. ಚಾಸಾ 4, 5 ಮತ್ತು 6 ಇವರ ಹೇಳಿಕೆ ಪಡೆದಿರುತ್ತೇನೆ . ಮತ್ತು ಚಾಸಾ 7 ರವರ ಹೇಳಿಕೆ ಪಡೆದಿರುತ್ತೇನೆ. ದಿಃ 22-03-2018 ರಂದು ಚಾರ್ಜ ಶೀಟ ಸಲ್ಲಿಸಿರುತ್ತೇನೆ. ಸಾಕ್ಷಿಗೆ ನ್ಯಾಯಾಲದ ಮುಂದೆ ಇರುವ ಮುದ್ದೆ ಮಾಲು 1 ಇದನ್ನು ತೋರಿಸಲಾಗಿ ಸಾಕ್ಷಿಯೂ ಸದರಿ ಮುದ್ದೆ ಮಾಲನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯೂ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದನ್ನು FIR ಎಂದು ಗುರುತಿಸಿದ್ದರಿಂದ ಸದರಿ ದಾಖಲೆಯನ್ನು ನಿಪಿ 6 ಎಂದು ಗುರುತಿಸಲಾಯಿತು. ಸದರಿ ದಾಖಲೆಯ ಮೇಲಿನ ಸಾಕ್ಷಿಯ ಸಹಿಯನ್ನು ನಿಪಿ 6ಎ ಎಂದು ಗುರುತಿಸಲಾಯಿತು. ಸಾಕ್ಷಿಯೂ ನಿಪಿ 4 ನೋಡಿ ಗುರುತಿಸಿದ್ದು ಸದರಿ ದಾಖಲೆಯ ಮೇಲಿನ ಸಹಿಯನ್ನು ನಿಪಿ 4ಬಿ ಎಂದು ಗುರುತಿಸಲಾಯಿತು. ಸಾಕ್ಷಿಯೂ ನಿಪಿ 1 ನ್ನು ಗುರುತಿಸಿದ್ದು ಸದರಿ ದಾಖಲೆಯ ಮೇಲಿನ ಸಾಕ್ಷಿಯ ಸಹಿಯನ್ನು ನಿಪಿ 1 ಸಿ ಎಂದು ಗುರುತಿಸಲಾಗಿದೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯೂ ಅದನ್ನು ಅಥಣಿ ಸರಕಾರಿ ಆಸ್ಪತ್ರೆಯಿಂದ ನೀಡಿದ ಗಾಯದ ಪ್ರಮಾಣ ಪತ್ರವನ್ನು ಗುರುತಿಸಿದ್ದರ ಮೇಲಿನ ಸದರಿ ದಾಖಲೆಯನ್ನು ನಿಪಿ 7 ಎಂದು ಗುರುತಿಸಲಾಯಿತು. ಸದರಿ ದಾಖಲೆಯ ಮೇಲಿನ ಅವರ ಸಹಿಯನ್ನು ನಿಪಿ 7 ಎ ಎಂದು ಗುರುತಿಸಲಾಯಿತು. ಮೈತ್ರಿ ಆಸ್ಪತ್ರೆಯಿಂದ ನೀಡಲಾದ ಗಾಯದ ಪ್ರಮಾಣ ಪತ್ರವನ್ನು ಸಾಕ್ಷಿಯೂ ನೋಡಿ ಗುರುತಿಸಿದ್ದು ಅದನ್ನು ನಿಪಿ 8 ಮತ್ತು ಅವರ ಮೇಲಿನ ಸಾಕ್ಷಿಯ ಸಹಿಯನ್ನು ನಿಪಿ 8ಎ ಎಂದು ಗುರುತಿಸಲಾಯಿತು.

**<u>ವಾಟೀ ಸವಾಲುಃ ಆರೋಪಿ ಪರ ಶ್ರೀ . BID ವಕೀಲರಿಂದಃ</u>**

ನನಗೆ MLC ಮಾಹಿತಿ ಬಂದಾಗ ಸಮಯ ರಾತ್ರಿ 12.00 ಗಂಟೆ ಆಗಿತ್ತು. ಮೊದಲು ನಾವು ಸರಕಾರಿ ಆಸ್ಪತ್ರೆಗೆ ಹೋಗಿ ನಂತರ ಮೈತ್ರಿ ಆಸ್ಪತ್ರೆಗೆ ಹೋಗಿರುತ್ತೇವೆ. ಸರಕಾರಿ ಆಸ್ಪತ್ರೆಯಲ್ಲಿ ಡಾ. ಮೇತ್ರಿ ಕಾರ್ಯನಿರ್ವಹಿಸುತ್ತಿದ್ದರು. ಮೇತ್ರಿ ಆಸ್ಪತ್ರೆಗೆ ಹೋದಾಗ ಮರುದಿನ ಮಧ್ಯಾಹ್ನ 12.00 ಗಂಟೆ ಆಗಿತ್ತು. ಸರಕಾರಿ ಆಸ್ಪತ್ರೆಗೆ ನಾನು ಹೋದ ನಂತರ ಮರುದಿನ ಮಧ್ಯಾಹ್ನ 12.00 ಗಂಟೆ ಆಗುವವರೆಗೂ ನಾನು ಮೇತ್ರಿ ಆಸ್ಪತ್ರೆಗೆ ಹೋಗಿರಲಿಲ್ಲ ಎಂದರೆ ಸರಿ. ದಿಃ 13-01-2018 ರಂದು ಬೆಳಿಗ್ಗೆ 09.00 ಗಂಟೆಗೆ ಮತ್ತು ಮಧ್ಯಾಹ್ನ 12.00 ಗಂಟೆಗೆ ಮೇತ್ರಿ ಆಸ್ಪತ್ರೆ ಹೋಗಿದ್ದೆ. ದಿಃ 13-01-2018 ರಂದು ಬೆಳಿಗ್ಗೆ 09.00 ಗಂಟೆಗೆ ಮತ್ತು ಮಧ್ಯಾಹ್ನ 12.00 ಗಂಟೆಗೆ ಮೇತ್ರಿ ಆಸ್ಪತ್ರೆ ಹೋಗಿದ್ದನ್ನು ನಾನು ಮೊಮೆಂಟ ರಜಿಸ್ಟರನಲ್ಲಿ ನಮೂದು ಮಾಡಿದ್ದೇನೆ. ಸರಕಾರಿ ಆಸ್ಪತ್ರೆ ಮತ್ತು ಖಾಸಗಿ ಆಸ್ಪತ್ರೆಯಲ್ಲಿ ಇರುವ ವೈದ್ಯರು ಇಬ್ಬರೂ ಸಹ ಒಬ್ಬರೆ ಆಗಿದ್ದಾರೆ ಎಂದರೆ ಸರಿ. ಫಿರ್ಯಾದಿಯನ್ನು ಅವರ ಚಾಸಾ 6 ರವರರು ಬರೆದುಕೊಟ್ಟಿರುತ್ತಾರೆ. ಫಿರ್ಯಾದಿಯನ್ನು ನಾವು ಆಸ್ಪತ್ರೆಗೆ ಹೋದ ನಂತರ ಮೈದ್ಯರ ಸಮಕ್ಷಮ ಬರೆಯಲಾಗಿರುತ್ತದೆ. ದಿಃ 13-01-2018 ರಂದು ಸಂಜೆ 4.30 ಕ್ಕೆ ಘಟನಾ ಸ್ಥಳಕ್ಕೆ ಹೋಗಿರುತ್ತೇವೆ. ತಂಗಡಿಯಲ್ಲಿರುವ ಗೀರಣಿಯೂ ಚಾಸಾ 7 ರವರಿಗೆ ಸಂಬಂಧಿಸಿದ್ದು ಇರುತ್ತದೆ. ಚಾಸಾ 2 ರವರನ್ನು ನಾನು ತಂಗಡಿಗೆ ಹೋದ ಮೇಲೆ ಅವರನ್ನು ನಾನೇ ಕರೆಸಿರುತ್ತೇನೆ. ಪಂಚನಾಮೆಯನ್ನು ಘಟನಾಸ್ಥಳದಲ್ಲಿ ಮಾಡಿರುತ್ತೇನೆ. ನಾನು ಘಟನಾ ಸ್ಥಳಕ್ಕೆ ಸರಕಾರಿ ವಾಹನದಲ್ಲಿ ಹೋಗಿರುತ್ತೇನೆ. ನಾನು ಸರಕಾರಿ ವಾಹನದಲ್ಲಿ ಹೋಗಿರುತ್ತೇನೆ ಎಂದು ಪಂಚನಾಮೆಯಲ್ಲಿ ಬರೆಯಿಸಿಲ್ಲ ಎಂದರೆ ಸರಿ. ಪಂಚನಾಮೆಯನ್ನು ನಾನೇ Type ಮಾಡಿರುತ್ತೇನೆ. ಪಂಚನಾಮೆಯನ್ನು ಟೈಪ ಮಾಡಿ ಸ್ಥಳದಲ್ಲೆ ಪ್ರಿಂಟ ತೆಗೆದಿರುತ್ತೇನೆ. ಲ್ಯಾಪ ಟಾಪ ಮತ್ತು ಬ್ಯಾಟರಿ ಚಾಲಿತ ಪ್ರಿಂಟರ ಬಳಸಿ ಪ್ರಿಂಟ ತೆಗೆದಿರುತ್ತೇನೆ. ಲ್ಯಾಪ ಟಾಪ ಮತ್ತು ಬ್ಯಾಟರಿ ಚಾಲಿತ ಪ್ರಿಂಟರ ಬಳಸಿ ಪ್ರಿಂಟ ತೆಗೆದಿರುತ್ತೇನೆ ಎಂದು ನಾನು ಪಂಚನಾಮೆಯಲ್ಲಿ ಬರೆದಿರುತ್ತೇನೆ ಎಂದರೆ ಸರಿ. ಬ್ಯಾಟರಿ ಮತ್ತು ಲ್ಯಾಪ ಟಾಪ ಯಾವ ಕಂಪನಿಯಯಿ ಎಂದು ನನಗೆ ಹೇಳಲು ಬರುವುದಿಲ್ಲ. ಘಟನಾ ಸ್ಥಳದ ಸರ್ವೇ ನಂ ನನಗೆ ಹೇಳಲು ಬರುವುದಿಲ್ಲ. ಸರಕಾರಿ ರಸ್ತೆ ಪಕ್ಕ ಘಟನೆಯಾಗಿದೆ. ಘಟನಾ ಸ್ಥಳಕ್ಕೂ ಮತ್ತು ಗಿರಣಿಗೂ 20 ಪೂಟ ಅಂತರ ಇದೆ. ಘಟನಾ ಸ್ಥಳದ ಚಕಬಂದಿಯನ್ನು ನನಗೆ ಹೇಳಲು ಬರುತ್ತದೆ. ದಕ್ಷಿಣಕ್ಕೆ ಶಿವಾಜಿ ಸರ್ಕಲ ಇದೆ . ಶಿವಾಜಿ ಸರ್ಕಲದಿಂದ ಪಠಾಣ ಇವರ ಗೀರಣಿಯು ಪಶ್ಚಿಮದ ಕಡೆ ಇದೆ.

ಗಾಯದ ಪ್ರಮಾಣ ಪತ್ರವನ್ನು ಘಟನೆಯಾದ ನಂತರ ಪಡೆದಿರುತ್ತೇನೆ. ಸರಕಾರಿ ಆಸ್ಪತ್ರೆಯಲ್ಲಿ ಗಾಯಾಳುವಿಗೆ ಆದ ಗಾಯಗಳ ಬಗ್ಗೆ ಗಾಯದ ಪ್ರಮಾಣ ಪತ್ರವನ್ನು ಪಡೆದಿದೇನೆ ಎಂದು ಸುಳ್ಳು ಸಾಕ್ಷಿ

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 4 ಮತ್ತು 5 ಇವರ ಹೇಳಿಕೆ ಪಡೆದಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 4 ಮತ್ತು 5 ಇವರ ಹೇಳಿಕೆಯನ್ನು ಘಟನೆಯಾದ ಮರುದಿನ ಪಡೆದಿರುತ್ತೇನೆ. ಆರೋಪಿತರನ್ನು ದಸ್ತಗೀರ ಮಾಡುವ ಸಮಯದಲ್ಲಿ ಅವರಿಯಿಂದ ಆಧಾರ ಕಾರ್ಡ ಅಥವಾ ಇನಾವುದೇ ಗುರುತಿನ ಕಾರ್ಡನ್ನು ಪಡೆದಿರುವುದಿಲ್ಲ ಎಂದರೆ ಸರಿ. ದಸ್ತಗಿರಿಯ ನಂತರ ಆರೋಪಿತರ ಸಂಬಂಧಯಾದ ಮಹಾದೇವ ಸೂರ್ಯವಂಶಿ ಇವರಿಗೆ ತಿಳಿಸಿರುತ್ತೇನೆ. ಮು. ಮಾ 1 ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತದೆ ಎಂದರೆ ಸರಿ. ಈ ಪ್ರಕರಣಕ್ಕೂ ಆರೋಪಿತರಿಗೂ ಯಾವುದೇ ಸಂಬಂದ ಇಲ್ಲದಿದ್ದರು ಸುಳ್ಳು ಪ್ರಕರಣ ದಾಖಲಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಿರ್ಯಾದಿಯನ್ನು ನಾನೇ ದಾಖಲಿಸಿದ್ದು ಅದಕ್ಕೆ ಪೂರಕವಾಗಿ ದಾಖಲಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ

4 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಹಾಗೂ ಜೆ.ಎಮ್.ಎಫ್.ಸಿ.ನ್ಯಾಯಾಲಯ, ಅಥಣಿ.